# ಎರಡನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
# ಜೆ ಎಂ ಎಫ್ ಸಿ ನ್ಯಾಯಾಲಯ, ಭದ್ರಾವತಿ
# ಸಿಸಿ ಸಂಖ್ಯೆಃ 2332/2025

**ಪಿರ್ಯಾದುದಾರರುಃ** ಹಳೆ ನಗರ ಪೋಲೀಸ್ ಠಾಣೆ , ಭದ್ರಾವತಿ.

ವಿರುದ್ಧ

**2 ನೇ ಆರೋಪಿಃ** ಅಕೀಲ್,
ಬಿನ್ ಅಬ್ದುಲ್ ಸೈಯದ್ ಬಾಷಾ,
24 ವರ್ಷ, ವಾಸಃ ನೆಹರು ನಗರ,
17 ನೇ ವಾರ್ಡ್, ಭದ್ರಾವತಿ.

**ಆಪಾದನೆ ಸಾರಾಂಶ**

ದಿನಾಂಕಃ 27.12.2025 ರಂದು ಸಂಜೆ 04.30 ರ ಸಮಯದಲ್ಲಿ, ಭದ್ರಾವತಿ ಹಳೆನಗರ ಪೋಲಿಸ್ ಠಾಣಾ ವ್ಯಾಪ್ತಿಯ ಗೌರವಾನ್ವಿತ 04 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಮುಂಭಾಗದಲ್ಲಿ ನ್ಯಾಯಾಲಯದ ಕಲಾಪ ನಡೆಯುವ ಸಮಯದಲ್ಲಿ, 2 ನೇ ಆರೋಪಿಯಾದ ನೀವು ಅಮಲಿನಿಂದ ಅವ್ಯವಸ್ಥಿತವಾಗಿ ನ್ಯಾಯಾಲಯದ ಒಳಗೆ, ಹೊರಗೆ ಓಡಾಡಿದ್ದು ನ್ಯಾಯಾಧೀಶರ ಗಮನಕ್ಕೆ ಬಂದಿದ್ದು, ನ್ಯಾಯಾಧೀಶರು 2 ನೇ ಆರೋಪಿಯಾದ ನಿಮ್ಮನ್ನು ಪ್ರಶ್ನಿಸಿದಾಗ ನೀವು ಅರಿವಿಲ್ಲದಂತೆ ಹಾಗೂ ನ್ಯಾಯಾಲಯಕ್ಕೆ ಅವಮಾನವಾಗುವ ರೀತಿಯಲ್ಲಿ ದುರ್ನಡತೆ ಪ್ರದರ್ಶಿಸಿರುವುದರಿಂದ 2 ನೇ ಆರೋಪಿಯಾದ ನೀವು 267 ಬಿ.ಎನ್.ಎಸ್ ರ ಅಡಿ ಕ್ಷಾರ್ಹ ಅಪರಾದ ಮಾಡಿರುತ್ತೀರಾ ಎಂದು ಆರೋಪಿಸಲಾಗಿದೆ.

ಕೊನೆಯದಾಗಿ, ಮೇಲೆ ಹೇಳಿದ, ದಿನಾಂಕ, ಸ್ಥಳ ಹಾಗೂ ಮೇಲೆ ಹೇಳಿದ ರೀತಿ 2 ನೇ ಆರೋಪಿಯಾದ ನೀವು ದುರ್ನಡತೆ ಪ್ರದರ್ಶಿಸಿದ್ದರಿಂದ ಮಾದಕ ವಸ್ತು ಗಾಂಜಾವನ್ನು ಸೇವನೆ ಮಾಡಿದಂತೆ ಕಂಡು ಬಂದಿರುವುದು ಸಾಕ್ಷ್ಯಾಧಾರಗಳಿಂದ ದೃಢಪಟ್ಟಿದ್ದರಿಂದ 2 ನೇ

ಆರೋಪಿಯಾದ  ನೀವು ಎನ್‌ಡಿಪಿಎಸ್ ಕಾಯ್ದೆಯ ಕಲಂ 27(ಬಿ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾದ ಮಾಡಿರುತ್ತೀರಾ ಎಂದು ಆರೋಪಿಸಲಾಗಿದೆ.

ಪ್ರಶ್ನೆ 1: ಈಗ ಓದಿ ತಿಳಿಸಿ ಹೇಳಲಾದ ನಿಮ್ಮ ಮೇಲಿನ ಆಪಾದನೆ ತಿಳಿಯಿತೇ?
ಉತ್ತರಃ  ತಿಳಿಯಿತು.

ಪ್ರಶ್ನೆ 2: ಆಪಾದನೆಯನ್ನು ಒಪ್ಪುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೋ?
ಉತ್ತರಃ  ಆಪಾದನೆಯನ್ನು ಒಪ್ಪುತ್ತೇನೆ.

(ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತನಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ).

ದಿನಾಂಕಃ 24.06.2026

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಭದ್ರಾವತಿ.

2 ನೇ  ಆರೋಪಿಯ ಸಹಿ